ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 56-2013

ಸಿ.ಡಬ್ಲ್ಯೂ -06
ಪಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರು :- ಹರೀಶ್ ಕೆ.ವಿ
ತಂದೆಯ ಹೆಸರು :- ಲೇಟ್ ವೆಂಕಟಪ್ಪ
ವಯಸ್ಸು :- 39 ವರ್ಷ
ಉದ್ಯೋಗ :- ಖಾಸಗಿ ಕೆಲಸ
ವಾಸ :- ಕುಣಿಗಲ್

**ಸಾಕ್ಷಿಗೆ ದಿಃ 17.11.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿಗಳ ದಸ್ತಗಿರಿ ಮತ್ತು ಅಮಾನತ್ತು ಪಂಚನಾಮೆಗೆ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ದಿಃ 08.02.2013 ರಂದು ಸಂಜೆ 3 ರಿಂದ 4 ಗಂಟೆಯ ಸಮಯದಲ್ಲಿ ಸಿ.ಪಿ.ಐ ಕುಣಿಗಲ್ ಕಚೇರಿಯಲ್ಲಿ ಸಹಿ ಮಾಡಿದ್ದು ಆ ಸಮಯದಲ್ಲಿ ಚಾಸಾ 5 ಸಹ ಇದ್ದರು. ಪೋಲಿಸರು ಆರೋಪಿತರನ್ನು ತೋರಿಸಿ ಅವರು ಹಾಜರುಪಡಿಸಿದ 2 ನಕಲಿ ಕಾಸಿನ ಸರಗಳನ್ನು ಜಪ್ತು ಮಾಡಿದ್ದು ಒಂದೊಂದು ಸರದಲ್ಲಿ 10 ನಕಲಿ ಕಾಸುಗಳು ಇರುತ್ತವೆ ಹಾಗೂ ಕರಿಮಣಿಗಳು ಸಹ ಇದ್ದು ತಾಳಿ ಇದ್ದು ತಾಳಿ ತರಹ ಇರುತ್ತದೆ. ನನ್ನ ಸಮಕ್ಷಮ ಮೊಬೈಲ್ ಮತ್ತು ಬಟ್ಟೆ ಕೈಚೀಲವನ್ನು ಸಹ ಜಪ್ತು ಮಾಡಿಕೊಂಡಿರುತ್ತಾರೆ.

**ಮೂಲ ಪಂಚನಾಮೆ ಮೂಲ ಸಿಸಿ 43/2013 ರ ಪ್ರಕರಣದಲ್ಲಿ ಇದ್ದು ಸದರಿ ಪ್ರಕರಣ ಈಗಾಗಲೇ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಕಳುಹಿಸಿರುವ ಕಾರಣ ದಾಖಲೆಗಳನ್ನು ಗುರುತಿಸಿರುವುದಿಲ್ಲ.**
**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.